ಓ ಎಸ್ಃ 209/2016

ಪಿ ಡಬ್ಲ್ಯೂ ಃ 1

ದಿನಾಂಕಃ 03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ಪ್ರತಿವಾದಿ 6 ಮತ್ತು 9 ರವರ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ**

6 ನೇ ಪ್ರತಿವಾದಿ ಮಾನ್ಯ ನ್ಯಾಯಾಲಯದ ಮುಂದೆ ಹಾಕಿರುವ ಲಿಖಿತ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ವಕೀಲರ ಕಡೆಯಿಂದ ನಾನು ಸದರಿ ಲಿಖಿತ ಹೇಳಿಕೆಯಲ್ಲಿ ಇರುವ ವಿಷಯಗಳ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ. 6 ನೇ ಪ್ರತಿವಾದಿ ದಾವಾ ಐಟಂ ನಂಬರ್ 1 ರಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಲಿಖಿತ ಹೇಳಿಕೆಯಲ್ಲಿ ಬರೆಯಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. 6 ನೆ ಪ್ರತಿವಾದಿ ತಕರಾರು ಸಲ್ಲಿಸಿದ ಮೇಲೆ ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ನೋಡಿ ತಿಳಿದುಕೊಳ್ಳಲು ನನಗೆ ಹುಷಾರಿಲ್ಲದ ಕಾರಣ ನಾನು ತಿಳಿದುಕೊಂಡಿಲ್ಲ. ನಾನು ಈ ದಿನ ಸಾಕ್ಷಿ ಹೇಳುವ ಮುಂಚೆ ಸದರಿ ದಾಖಲಾತಿಗಳ ಬಗ್ಗೆ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ , ಆದರೆ ನಾನು ಆ ದಾಖಲಾತಿಗಳ ಬಗ್ಗೆ ಇನ್ನು ಮುಂದೆ ತಿಳಿದುಕೊಳ್ಳುತ್ತೇನೆ.

ದಾವಾ ಐಟಂ ನಂಬರ್ 1 ರ ಸ್ವತ್ತು 1956 ರಿಂದ ಈ ತನಕ ಆಗಿರುವ ವ್ಯವಹಾರಗಳ ಬಗ್ಗೆ ದಾಖಲಾತಿಗಳನ್ನು ನಾನು ನೋಡಿ ತಿಳಿದುಕೊಂಡಿಲ್ಲ ಎಂದರೆ ಸಾಕ್ಷಿ ನಾನು ನೋಡಿರುತ್ತೇನೆ, ತಿಳಿದುಕೊಂಡಿರುತ್ತೇನೆ, ಪಹಣಿಗಳಲ್ಲಿ ಹೆಸರುಗಳನ್ನು ಬದಲಾವಣೆ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಹಣಿ ಬದಲಾವಣೆ ಮತ್ತು ಪತ್ರಗಳ ಬಗ್ಗೆ ನಾನು ಎಲ್ಲೂ ಪ್ರಶ್ನೆ ಮಾಡಿ ಎ ಸಿ ಮತ್ತು ಡಿ ಸಿ ರವರ ಮುಂದೆ ಎಲ್ಲೂ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ದಿನವೂ ಕೂಡ ಮಾನ್ಯ ನ್ಯಾಯಾಲಯದಲ್ಲಿ ಇರುವ ಸದರಿ ದಾವೆಯಲ್ಲಿ ನಾನು ಸದರಿ ಪಹಣಿಗಳನ್ನು ಮತ್ತು ಪತ್ರಗಳನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ.

ಮೊದಲನೆ ಐಟಂ ನಂಬರ್ 1 ಕ್ಕೆ ಮತ್ತು ನಮ್ಮ ಕುಟುಂಬಕ್ಕೆ ಸಂಬಂದ ಇಲ್ಲದೇ ಇದ್ದರೂ ನಾನು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲನೆ ಐಟಂ ನಂಬರ್ 1 ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ಸೂಚಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ

ಸಾಕ್ಷಿ ನಾನು ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸದರಿ ಸ್ವತ್ತು ನಮ್ಮ ಒಟ್ಟು ಕುಟುಂಬದ ಸ್ವತ್ತು ಅಲ್ಲ ಎಂದು ಗೊತ್ತಿದ್ದರೂ ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೂ ಮತ್ತು ದಾವಾ ಐಟಂ ನಂಬರ್ 1 ಕ್ಕೂ ಸಂಬಂದ ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**